


## ಆತಂಕಕ್ಕೆ ಉತ್ತರ

‘ಮಕ್ಕಳಿಗೇಕೆ ಹಸಿವು ಆಗುವುದಿಲ್ಲ’, ಡಾ.ಕೆ.ಎಸ್. ಪವಿತ್ರ ಅವರ ಮುಖಪುಟ ಲೇಖನ (ಸುಧಾ, ಏಪ್ರಿಲ್ 12) ಮಕ್ಕಳು ಊಟ ಮಾಡುತ್ತಿಲ್ಲ ಎಂದು ತಂದೆ ತಾಯಿಯರು ಆತಂಕಪಡುತ್ತಿರುವುದಕ್ಕೆ ಸೂಕ್ತ ಉತ್ತರ ನೀಡಿದೆ. ಮಕ್ಕಳಿಗೆ ಹಸಿವಾಗದಿರಲು ಮುಖ್ಯ ಕಾರಣಗಳೇನು?, ಅದಕ್ಕೆ ಪಾಲಕರು, ಜಂಕ್‌ಫುಡ್‌ಗಳು, ಪರಿಸರ ಎಷ್ಟು ಹೊಣೆ? ಮುಂತಾದ ಅಂಶಗಳನ್ನು ಚೆನ್ನಾಗಿ ವಿವರಿಸಿದ್ದಾರೆ.

– ಮೀನಾಕ್ಷಿ ಕೆ. ರಾಮಗುಂಡಿ ಬೈಲಹೊಂಗಲ,
ಸ್ಮಿತಾ ಮೈಸೂರು ಹುಬ್ಬಳ್ಳಿ,
ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ

## ಜಂಕ್‌ಫುಡ್ ದಾಸರು

ಕಾಲ ಬದಲಾಗಿದೆ. ಹೆಂಡತಿ ಮನೆಯಲ್ಲಿ ಗಂಡ ಆಫೀಸಿನಲ್ಲಿ ತಂದೆ ತಾಯಿ ಆಶ್ರಮದಲ್ಲಿ ಮಕ್ಕಳಿಗೆ ಉಣಿಸುವವರಾರು? ಹಿಂದೆ ಅಜ್ಜ ಅಜ್ಜಿಯರು ಮಕ್ಕಳಿಗೆ ಕಥೆ ಹೇಳಿ ಊಟ ಮಾಡಿಸುತ್ತಿದ್ದರು. ಈಗ ಟೀವಿ, ಮೊಬೈಲ್ ಬಂದು ಮಕ್ಕಳ ಮನೆ ಊಟವನ್ನು ಕಿತ್ತುಕೊಂಡಿದೆ. ಮಕ್ಕಳು ಹೊರಗಿನ ಜಂಕ್‌ಫುಡ್ ನ ದಾಸರಾಗಿದ್ದಾರೆ.

–ತೂರಗಲ್ಲ ಉಮೇಶ ರಾಮದುರ್ಗ

## ಅಸಾಂದರ್ಭಿಕ

‘ವಿಚಾರ ಲಹರಿ’ಯಲ್ಲಿ ‘ಜಾತಿ ಭಾರತ’ (ಶಿಕಾಕು) ವಿಶ್ಲೇಷಣೆ ಮಾಡುವ ಭರದಲ್ಲಿ ಕವಿ ರಾಘವಾಂಕನು ‘ಹರಿಶ್ಚಂದ್ರ ಕಾವ್ಯ’ದಲ್ಲಿ ವಿಶ್ವಾಮಿತ್ರನು ಕನ್ಯೆಯರನ್ನು ‘ಹೊಲತಿ’ಯರೆಂದು ಕರೆದು ಬಿಡುತ್ತಾನೆ ಎಂದು ಉದ್ಗರಿಸಿದ್ದು, ಅಸಾಂದರ್ಭಿಕ. ತನ್ನನ್ನು ಪರೀಕ್ಷಿಸಲೆಂದು ಬಂದ ಕನ್ಯೆಯರನ್ನು ಹರಿಶ್ಚಂದ್ರನು ದೂಷಿಸುತ್ತಾನೆ, ಜರೆಯುತ್ತಾನೆ. ಅದೊಂದು ನಾಟಕೀಯ ಪ್ರಸಂಗ. ಕವಿ ವಾಣಿಯಲ್ಲ. ಇಷ್ಟಾಗಿ ಆ ಕನ್ಯೆಯರು ಹರಿಶ್ಚಂದ್ರ ರಾಜನೊಂದಿಗೆ ವರ್ತಿಸುವ ರೀತಿ, ವಿಶ್ವಾಮಿತ್ರನ ಬೋಧೆಯೇ ಹೊರತು, ವಾಸ್ತವವಲ್ಲ.

–ಸರ್ವಜಿತ ಹುಬ್ಬಳ್ಳಿ

## ಸಕಾಲಿಕ ಬರಹ

‘ನಿಮ್ಮೊಡನೆ’ಯಲ್ಲಿ ‘ಸೋರಿಕೆ: ರಾಷ್ಟ್ರೀಯ ಲಜ್ಜೆ’ (ರಘುನಾಥ ಚ.ಹ.) ಬರಹ ಸಕಾಲಿಕ.

–ಕೆ. ಪ್ರಕಾಶ್ ಬಾಳೆಹೊನ್ನೂರು

## ಶ್ಲಾಘನೆಗೆ ಅರ್ಹರು

‘ಬೆಟ್ಟದಲ್ಲೊಬ್ಬ ಗಿರಿಭಟ್ರು’ (ಸಂತೋಷ್ ರಾವ್ ಪೆರ್ಮುಡ ) ಲೇಖನ ಚೆನ್ನಾಗಿದೆ. ಕುಮಾರ ಪರ್ವತಕ್ಕೆ ಚಾರಣ ಬರುವವರಿಗೆ ಕಳೆದ 4 ದಶಕಗಳಿಂದ ಊಟ ಹಾಗೂ ವಸತಿ ವ್ಯವಸ್ಥೆಯನ್ನು ಕಡಿಮೆ ದರದಲ್ಲಿ ಮಾಡಿ ಕೊಡುತ್ತಿರುವ ಗಿರಿ ಭಟ್ರು ಶ್ಲಾಘನೆಗೆ ಅರ್ಹರು.

– ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು, ಶ್ರೀನಾಥ್ ಕೊನೇಟಿ ಬೆಂಗಳೂರು,

## ವಿವರ ಇರಬೇಕಿತ್ತು

ಗಿರಿ ಭಟ್ಟರ ಸೇವೆ ಅನನ್ಯ. ಆದರೆ ಅವರ ಮನೆಯವರ ಬಗ್ಗೆಯೂ ಲೇಖನದಲ್ಲಿ ವಿವರ ಇರಬೇಕಿತ್ತು.

– ಕೊ.ಸು.ನರಸಿಂಹ ಮೂರ್ತಿ ಮೈಸೂರು

## ಮುಂಜಾಗ್ರತೆ ಇರಲಿ

‘ಇಳಿ ವಯಸ್ಸಿನವರ ಏರು ಚಾರಣ’ (ಧರ್ಮಾನಂದ ಶಿರ್ವ) ದಲ್ಲಿ ಲೇಖಕರು ನೀಡಿದ ‘ವೀಕ್ಷಕ ವಿವರಣೆ’ ನಾವೇ ಚಾರಣ ಮಾಡುತ್ತಿದ್ದಂತೆ ಅನ್ನಿಸಿತು! ಚಾರಣ ಮಾಡಿದವರು ಎಲ್ಲರೂ ಹಿರಿಯ ನಾಗರಿಕರು. ಇಂತಹ ಚಾರಣ ಮಾಡುವುದು ಒಂದು ಅದ್ಭುತ ಸಾಹಸ. ಆದರೆ ಎಚ್ಚರಿಕೆ ಇರಲಿ. ವಾಕಿಂಗ್ ಸ್ಟಿಕ್, ಕೋಲು ಬಳಸುವುದು ಕ್ಷೇಮಕರ. ಜತೆಯಲ್ಲಿ ಕೆಲವು ಯುವಕರೂ ಇದ್ದರೆ ಹೆಚ್ಚು ಕ್ಷೇಮ.

–ಪಿ. ಜಯವಂತ ಪೈ, ಕುಂದಾಪುರ,
ನಾರಾಯಣ ಯಾಜಿ, ಶಿರಾಲಿ, ಜಯಲಕ್ಷ್ಮಿ ತೂರಗಲ್ಲ ರಾಮದುರ್ಗ, ಮುಕುಂದ ಹೆರಕಲ್ಲ ಕಲಬುರಗಿ

## ಬನ್ನಿ ಬಾಣಂತಿ ಕಣಿವೆಗೆ

ಚಾರಣ ಲೇಖನವನ್ನು ಹಿರಿಯ ನಾಗರಿಕರೆಲ್ಲರೂ ಓದಬೇಕು ಹಾಗೂ ಕಪ್ಪತಗುಡ್ಡದ ಬಾಣಂತಿ ಕಣಿವೆಯಲ್ಲಿ ನಿಂತಷ್ಟು ಹೊತ್ತು ಕಿತ್ತಳೆ ಬಣ್ಣದಲ್ಲಿ ಕಾಣಬೇಕೆಂದರೆ ಚಾರಣ ಮಾಡಲೇ ಬೇಕು.

–ರಾಜಶೇಖರ ಹಾದಿಮನಿ ಧಾರವಾಡ

## ಕ್ರೀಡಾಲೋಕ

ಕ್ರೀಡಾಲೋಕ ಪುಟದಲ್ಲಿ ‘ಇದೆಲ್ಲಾ ಬೇಕಿತ್ತಾ ಸ್ಮಿತ್?’ ಲೇಖನ (ಜಿ.ಕೆ. ಪ್ರಮೋದ್) ನಿಜಕ್ಕೂ ಕ್ರೀಡಾಭಿಮಾನಿಗಳಿಗೆ ಓದಿನ ಸರದಿಯಲ್ಲಿ ಬೇಸರ ಮೂಡಿಸಿತ್ತು. ಆಟಕ್ಕೆ ಆಟದ್ದೇ ಆದ ಶೈಲಿ ಮುಖ್ಯ. ಗೆಲುವೊಂದೇ ಉಸಿರಾಗಬಾರದು. ಆಟದಲ್ಲಿ ಸೋಲೂ ಉಂಟು. ಪ್ರಪಂಚದ ಕ್ರಿಕೆಟ್‌ನಲ್ಲಿ ಯಾರೂ ಗೆಲ್ಲದಷ್ಟು ಗೆದ್ದಿರುವ ನಿಮಗೇ (ಆಸ್ಟ್ರೇಲಿಯನ್ನರು) ಕೆಲವೇ ಸೋಲುಗಳು ಸ್ಮರಣೀಕೆಯಾಗಲಿಲ್ಲವೇ? ಈ ಲೇಖನದಲ್ಲಿ ಸಚಿನ್, ದ್ರಾವಿಡ್ ಕುರಿತ (ಚಿತ್ರ ಸಮೇತ) ಪ್ರಸ್ತಾಪಗಳು ಹಿಡಿಸಲಿಲ್ಲ.

–ಎಚ್. ಆನಂದ್‌ಕುಮಾರ್ ಚಿತ್ರದುರ್ಗ

## ಮನಮುಟ್ಟುವಂತಿದೆ

ಕಥೆ ‘ತಾರಾಮೌಲ್ಯ’ (ತುಳಸಿ ಬಾಲಕೃಷ್ಣ; ಅನುವಾದ ಇಂದ್ರಾಣಿ ವಿಠ್ಠಲ್) ಮನಮುಟ್ಟುವಂತಿದೆ.

–ಸುಂದರ್ ಬೆಂಗಳೂರು, ಕೆ.ಪಿ. ರಾಮಗುಂಡಿ ಬೈಲಹೊಂಗಲ

## ವಿಡಂಬನೆ

ಕಥೆ ಇಂದಿನ ಹಸಿ ಬಿಸಿ ನಿರ್ದೇಶಕರ, ನಟರ ನಡತೆಯನ್ನು ವಿಡಂಬನೆ (ಲೇವಡಿ)ಗೊಳಪಡಿಸಿದೆ.

–ಕೊಹಿಮ ಬಸರಕೋಡು

## ಭಯವಾಗಲಿಲ್ಲ ..

ಹಾರರ್ ಕಥೆಗಳು (ಮನೋರಂಜನ್. ಡಿ.ಎಸ್.) ಓದಿ ಭಯವಾಗಲಿಲ್ಲ, ಖುಷಿ ಆಯ್ತು.

–ರತ್ನಾಕರ ಹೆಗಡೆ ಕಟ್ಟೆ, ಮೂಡುಬಿದರೆ

### ಮಹಿಳೆಯರಿಗಾಗಿ ಪ್ರಬಂಧ ಸ್ಪರ್ಧೆ

ಮಹಿಳೆಯರೇ ಬರೆದ ಪ್ರಬಂಧಗಳ ಸಂಕಲನ ‘ರತ್ನಗರ್ಭ’ ಹೊರತರಲು ಲೇಖಕಿಯರಿಂದ ಪ್ರಬಂಧ ಆಹ್ವಾನಿಸಲಾಗಿದೆ. ಬರಹ ಕನಿಷ್ಠ ಎಂಟು ಪುಟಗಳಿರಬೇಕು. ಬಹುಮಾನ ಇದೆ. ಕೊನೆಯ ದಿನ ಸೆಪ್ಟೆಂಬರ್ 30. ಮಾಹಿತಿಗೆ: 9483702212/080–26481672

ASHTAVAIDYAN THAIKKATTU MOOSS
VAIDYARATNAM
SINCE 1941
ವೈದ್ಯರತ್ನಂ
ಹರ್ಬಲ್ ಸಾಬೂನು


ವೈದ್ಯರತ್ನಂ ಔಷಧ ಮಳಿಗೆಗಳಲ್ಲಿ ದೊರೆಯುತ್ತದೆ


VAIDYARATNAM
OUSHADHASALA PVT. LTD.
ಕೇಂದ್ರ ಕಛೇರಿ: ಒಲ್ಲೂರು, ತೈಕಾಡುಶೇರಿ, ತ್ರಿಚ್ಚೂರ್, ಕೇರಳ – 680306, ದೂರವಾಣಿ: +91–487 2432732
Web: www.vaidyaratnammooss.com,
E-commerce: www.keralaayurvedamedicine.com
ಬೆಂಗಳೂರು ಟ್ರೀಟ್‌ಮೆಂಟ್ ಸೆಂಟರ್ : ನಂ. 2335, 17ನೇ ಕ್ರಾಸ್, 24ನೇ ಮೈನ್, ಸೆಕ್ಟರ್–1, ಹೆಚ್.ಎಸ್.ಆರ್. ಲೇ–ಔಟ್, ಬೆಂಗಳೂರು – 560 102. ಫೋನ್: 080–22580020
ನಮ್ಮ ಆಯುರ್ವೇದ ಔಷಧಿಗಳ ಡೀಲರ್‌ಶಿಪ್ ಮಾಹಿತಿಗೆ ಸಂಪರ್ಕಿಸಿ: 0–98863 21936
ಬದಲಾಗುವ ಕಾಲಗಳಿಗೆ,
ಬದಲಾಗದ ಅಷ್ಟವೈದ್ಯ
ಆಯುರ್ವೇದ ಪದ್ಧತಿ